## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ. ನಾಗರಾಜು ಇವರು ನಿಯಮ 72ರ ಮೇರೆಗೆ ನೀಡಿರುವ ಸೂಚನೆಗೆ ಸರ್ಕಾರದ ಉತ್ತರ

**ವಿಷಯ:**

ಬೆಂಗಳೂರು ನಗರದ ಹೃದಯ ಭಾಗದಲ್ಲಿ ಸ್ಥಾಪಿತವಾದ ಆರ್.ಟಿ.ನಗರ ಪೊಲೀಸ್ ಠಾಣೆಯಿಂದ ಡಾ॥ ಅಂಬೇಡ್ಕರ್ ಮೆಡಿಕಲ್ ಕಾಲೇಜುವರೆಗೆ ಸಂಪರ್ಕ ಕಲ್ಪಿಸುವ ರಸ್ತೆಯಾದ ದಿನ್ನೂರು ಮುಖ್ಯ ರಸ್ತೆಯನ್ನು ಅಗಲೀಕರಣಗೊಳಿಸಿ ಅಭಿವೃದ್ಧಿ ಪಡಿಸಲು ಸುಮಾರು 25 ವರ್ಷಗಳ ಹಿಂದೆ ಯೋಜಿಸಿದ್ದು, ಇಲ್ಲಿಯವರೆಗೆ ಈ ಯೋಜನೆ ಕಾರ್ಯರೂಪಕ್ಕೆ ಬಂದಿರುವುದಿಲ್ಲ. ಇದರಿಂದಾಗಿ ವಾಹನ ಸವಾರರು, ಆಂಬ್ಯುಲೆನ್ಸ್ ಮತ್ತು ಇತರೆ ವಾಹನ ಸವಾರರಿಗೆ ಸಾಕಷ್ಟು ತೊಂದರೆ ಉಂಟಾಗುತ್ತಿದ್ದು, ಇದಲ್ಲದೇ ವಾಹನ ದಟ್ಟಣೆಯಿಂದ ಪರಿಸರ ಮೇಲೆಯು ಅಡ್ಡ ಪರಿಣಾಮ ಉಂಟಾಗುತ್ತಿದೆ. ಇದರಂತೆಯೇ ಟ್ಯಾನರಿ ರಸ್ತೆಯು (ಟ್ಯಾನರಿ ರಸ್ತೆಯ ಖಸಾಯಿ ಖಾನೆಯಿಂದ ನಾಗವಾರದವರೆಗೆ) ಈ ರಸ್ತೆಯು ಸಹ ಅಗಲೀಕರಣಗೊಳಿಸಿ ಅಭಿವೃದ್ಧಿಪಡಿಸಲು ಯೋಜಿಸಲಾಗಿತ್ತು. ಈಗ ಈ ಭಾಗದಲ್ಲಿ ಮೆಟ್ರೋ ಸಹ ಕಾರ್ಯರೂಪಕ್ಕೆ ಬರುತ್ತಿದ್ದು, ಮೆಟ್ರೋ ಕಾರ್ಯ ಪ್ರಾರಂಭವಾಗಿರುತ್ತದೆ. ಇದರಿಂದ ವಾಹನ ಸವಾರರಿಗೆ ಸಾಕಷ್ಟು ತೊಂದರೆ ಮತ್ತು ಅಡಚಣೆಗಳು ಉಂಟಾಗುತ್ತಿದ್ದು, ಯಾವುದೇ ಪರ್ಯಾಯ ವ್ಯವಸ್ಥೆಯು ಸಹ ಆಗಿರುವುದಿಲ್ಲ. ಈಗ ಮಾಧವ ಮುದಿಲಿಯಾರ್ ರಸ್ತೆಯಿಂದ ನಾಗವಾರ ಜಂಕ್ಷನ್‌ವರೆಗೆ ಟ್ಯಾನರಿ ರಸ್ತೆಯ ಉದ್ದಕ್ಕೂ ಉದ್ದೇಶಿತ ಎಲಿವೇಟೆಡ್ ಕಾರಿಡಾರ್ ನಿರ್ಮಾಣ ಮಾಡಲು ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಬಿಬಿಎಂಪಿ ವತಿಯಿಂದ ಅಲ್ಪಾವಧಿ ಟೆಂಡರ್ ಪ್ರಕಟಿಸಿದ್ದು, ಎಲಿವೇಟೆಡ್ ಕಾರಿಡಾರ್ ನಿರ್ಮಾಣ ಮಾಡಲು ರಸ್ತೆ ಅಗಲೀಕರಣಕ್ಕೆ ಬೇಕಾಗುವ ವೆಚ್ಚಕ್ಕಿಂತ 4 ಪಟ್ಟು ಹೆಚ್ಚು ವೆಚ್ಚ ಆಗುವುದರಿಂದ ಎಲಿವೇಟೆಡ್ ಕಾರಿಡಾರ್ ನಿರ್ಮಾಣ ಮಾಡುವ ಯೋಜನೆಯನ್ನು ಕೈಬಿಟ್ಟು ರಸ್ತೆ ಅಗಲೀಕರಣಕ್ಕಾಗಿ ಸರ್ಕಾರ ಏಕೆ ಕ್ರಮ ಕೈಗೊಳ್ಳಬಾರದು ಎಂಬುದರ ಬಗ್ಗೆ ಮಾಹಿತಿ ನೀಡುವ ಕುರಿತು.

**ಉತ್ತರ:**

ಬೆಂಗಳೂರು ನಗರದ ಹೃದಯ ಭಾಗದಲ್ಲಿ ಸ್ಥಾಪಿತವಾದ ಆರ್.ಟಿ.ನಗರ ಪೊಲೀಸ್ ಠಾಣೆಯಿಂದ ಡಾ॥ ಅಂಬೇಡ್ಕರ್ ಮೆಡಿಕಲ್ ಕಾಲೇಜುವರೆಗೆ ಸಂಪರ್ಕ ಕಲ್ಪಿಸುವ ರಸ್ತೆಯಾದ ದಿನ್ನೂರು ಮುಖ್ಯ ರಸ್ತೆಯನ್ನು ಅಗಲೀಕರಣಗೊಳಿಸಿ ಅಭಿವೃದ್ಧಿ ಪಡಿಸಲು ಸುಮಾರು 25 ವರ್ಷಗಳ ಹಿಂದೆ ಯೋಜಿಸಲಾಗಿದ್ದು, ಅದರಂತೆ, ಡಿ.ಪಿ.ಆರ್‌ಅನ್ನು ಸಹ ತಯಾರಿಸಲಾಗಿರುತ್ತದೆ. ಸದರಿ ಡಿ.ಪಿ.ಆರ್ ತಯಾರಿಕೆಯಂತೆ ದಿನ್ನೂರು ಮುಖ್ಯ ರಸ್ತೆಯಲ್ಲಿ ರಸ್ತೆ ಅಗಲೀಕರಣಕ್ಕೆ 601 ಆಸ್ತಿಗಳನ್ನು ಗುರುತಿಸಿ, ಭೂ–ಸ್ವಾಧೀನ ಪ್ರಕ್ರಿಯೆಗೆ ಚಾಲನೆ ನೀಡಲಾಗಿದ್ದು, ದಿನ್ನೂರು ಮುಖ್ಯರಸ್ತೆಯಲ್ಲಿ ಪ್ರಸ್ತುತ ಉಪ ನೋಂದಣಾಧಿಕಾರಿಗಳ ದರಗಳ ಅನುಸಾರ ಸರಾಸರಿ ಭೂಮಿಯ ಬೆಲೆಯು ಚ.ಮೀಗೆ ರೂ.78,000/– ಇದ್ದು, ಒಂದು ಕಿ.ಮೀ.ಗೆ ಸುಮಾರು ರೂ.154.00 ಕೋಟಿಗಳು ಭೂ–ಸ್ವಾಧೀನಕ್ಕೆ ವೆಚ್ಚವಾಗುತ್ತದೆ. ಸದರಿ ವೆಚ್ಚವು ಅಧಿಕವೆಂದು ಪರಿಗಣಿಸಿ ರಸ್ತೆ ಅಗಲೀಕರಣ ಯೋಜನೆಯನ್ನು ಕೈಬಿಡಲಾಗಿರುತ್ತದೆ.

ಟ್ಯಾನರಿ ರಸ್ತೆಯನ್ನು ಸಹ ರಸ್ತೆ ಅಗಲೀಕರಣವನ್ನು ಮಾಡಲು ಉದ್ದೇಶಿಸಲಾಗಿದ್ದು, ಭೂ–ಸ್ವಾಧೀನ ವೆಚ್ಚದಿಂದ ಸದರಿ ರಸ್ತೆ ಅಗಲೀಕರಣವನ್ನು ಕೈಬಿಡಲಾಗಿದ್ದು, ಪ್ರಸ್ತುತ ಮೆಟ್ರೋ ಯೋಜನೆಯನ್ನು ಮೆ॥ ಬಿ.ಎಂ.ಆರ್.ಸಿ.ಎಲ್ ಸಂಸ್ಥೆಯ ವತಿಯಿಂದ ಕೈಗೆತ್ತಿಕೊಳ್ಳಲಾಗಿರುತ್ತದೆ. ಸದರಿ ರಸ್ತೆಯನ್ನು ಬಳ್ಳಾರಿ ರಸ್ತೆಗೆ

. . .2/–

ಪರ್ಯಾಯವಾಗಿ ನಾಗರಿಕರು ಬಳಸುತ್ತಿದ್ದು, ವಾಹನ ದಟ್ಟಣೆ ಅಧಿಕವಾಗಿ ರಸ್ತೆ ಅಗಲೀಕರಣದ ಬದಲಾಗಿ 04 ಪಥದ ಮೇಲ್ಸೇತುವೆಯನ್ನು ನಿರ್ಮಿಸಲು ವಿಸ್ತೃತ ಕಾರ್ಯಸಾಧಕ ವರದಿಯಲ್ಲಿ ಉಲ್ಲೇಖಿಸಲಾಗಿರುತ್ತದೆ. ಈ ರಸ್ತೆಯಲ್ಲಿಯೂ ಮೇಲ್ಸೇತುವೆ ನಿರ್ಮಾಣಕ್ಕೆ ಹೋಲಿಸಿದಾಗ ಭೂಸ್ವಾಧೀನ ವೆಚ್ಚವು ಅಧಿಕವೆಂದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ಈ ಹಿನ್ನಲೆಯಲ್ಲಿ, ಮಾಧವ ಮುದಿಲಿಯಾರ್ ರಸ್ತೆಯಿಂದ ನಾಗವಾರ ಜಂಕ್ಷನ್‌ವರೆಗೆ ಟ್ಯಾನರಿ ರಸ್ತೆಯ ಉದ್ದಕ್ಕೂ ಉದ್ದೇಶಿತ ಎಲಿವೇಟೆಡ್ ಕಾರಿಡಾರ್ ನಿರ್ಮಾಣ ಮಾಡಲು ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಬಿಬಿಎಂಪಿ ವತಿಯಿಂದ ಅಲ್ಪಾವಧಿ ಟೆಂಡರ್ ಪ್ರಕಟಿಸಲಾಗಿರುತ್ತದೆ.

**ಸಂಖ್ಯೆ: ನಅಇ 120 ಎಂಎನ್‌ವೈ 2025 (ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ